## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ

**ಸಿ. ಸಿ. ನಂ.878/2024**

**ಪಿರ್ಯಾಧಿದಾರರುಃ** ಶ್ರೀ ಹೆಚ್ ಎಂ ಶಿವಪ್ಪ ಬಿನ್ ಲೇಟ್ ಮಂಜಪ್ಪ ನಾಯ್ಕ, 75 ವರ್ಷ, ಕೃಷಿಕರು, ವಾಸ ಮೊದಲಮನೆ, ಮರಿತೊಟ್ಲು ಗ್ರಾಮ, ಅಂದಗಾರು ಅಂಚೆ, ಕೊಪ್ಪ ತಾಲ್ಲೂಕು.

**-ವಿರುದ್ಧ -**

**ಆರೋಪಿಃ** ಶ್ರೀ ನಾಗೇಶ ಬಿನ್ ಚಿನ್ನಯ್ಯ ಗೌಡ, 52 ವರ್ಷ, ಕೃಷಿಕರು, ವಾಸ ಮೊದಲಮನೆ, ಮರಿತೊಟ್ಲು ಗ್ರಾಮ, ಅಂದಗಾರು ಅಂಚೆ, ಕೊಪ್ಪ ತಾಲ್ಲೂಕು.

### ಆರೋಪಣೆ

ಆರೋಪಿಯಾದ ನೀವು ಪಿರ್ಯಾದುದಾರರಿಂದ ರೂ. 2,00,000/- ಗಳನ್ನು 2023 ನೇ ಇಸವಿ ಜೂನ್ ಮೊದಲನೇ ವಾರದಂದು ಕೈ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣದ ಬಾಬ್ತು ಅವರಿಗೆ ಚೆಕ್ ನಂ. **375244** ದಿನಾಂಕ 21.12.2023 ನ್ನು ನಮೂದಿಸಿದ ವಿಜಯ ಬ್ಯಾಂಕ್, ಕೊಪ್ಪ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಪಿರ್ಯಾದಿದಾರರು ಸದರಿ ಚೆಕ್ ಅನ್ನು ಬ್ಯಾಂಕ್ ಆಪ್ ಬರೋಡಾ, ಕೊಪ್ಪ ಶಾಖೆಗೆ ಹಾಜರುಪಸಿದಾಗ ನಿಮ್ಮ ಖಾತೆಯಲ್ಲಿ **"ಸಾಕಷ್ಟು ಹಣ ಇಲ್ಲ"** ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 19.01.2024 ರಂತೆ ವಕೀಲರ ಮುಖಾಂತರ ನೋಟೀಸು ನೀಡಿದ್ದು, ಸದರಿ ನೋಟೀಸನ್ನು ನೀವು ದಿನಾಂಕ 27.01.2024 ರಂದು ತಿರಸ್ಕರಿಸಿದ್ದು, ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ-	ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ	ತಿಳಿಯಿತು

ಪ್ರಶ್ನೆ 2ಃ-	ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ	ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕ 18.12.2025.

ಸಹಿ/- 18.12.2025.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕೊಪ್ಪ